ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂ: 080-22343901, 22343904

ಕಾಲೇಜು ಶಿಕ್ಷಣ ಆಯುಕ್ತರ ಕಚೇರಿ,
ಬೆಂಗಳೂರು-560001.

**ಸಂಖ್ಯೆ:ಕಾಶಿಇ/ಶೈವಿ/218/ಸ್ಕೌಟ್-ಗೈಡ್ಸ್/2015-16**

ದಿನಾಂಕ: 22.11.2018

# ಸುತ್ತೋಲೆ

**ವಿಷಯ:** ರಾಜ್ಯದ ಎಲ್ಲಾ ಪದವಿ ಕಾಲೇಜುಗಳಲ್ಲಿ ದಿ ಭಾರತ್ ಸ್ಕೌಟ್ಸ್ & ಗೈಡ್ಸ್‌ನ ರೋವರ್/ರೇಂಜರ್ ಘಟಕಗಳನ್ನು ಕಡ್ಡಾಯವಾಗಿ ಪ್ರಾರಂಭಿಸುವ ಕುರಿತು ಮತ್ತು ರೋವರ್ಸ್ -ರೇಂಜರ್ಸ್ ಘಟಕಗಳಿಗಾಗಿ ಸಂಗ್ರಹಿಸಿದ ಹಣವನ್ನು ಬಳಸಿಕೊಳ್ಳುವ ಬಗ್ಗೆ.

**ಉಲ್ಲೇಖ:**
1. ರಾಜ್ಯ ಮುಖ್ಯ ಆಯುಕ್ತರು, ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರ ಪತ್ರ ಸಂಖ್ಯೆ:ಬಿಎಸ್.ಜಿ/ಎಸ್.ಹೆಚ್.ಕ್ಯೂ/712/2018-19 ದಿನಾಂಕ:20.06.2018.
2. ಈ ಕಛೇರಿಯ ಸುತ್ತೋಲೆ ಸಂಖ್ಯೆ:ಕಾಶಿಇ/ಶೈವಿ/145/ಪಠ್ಯೇತರ/2010-11 ದಿನಾಂಕ:14.06.2012 ಮತ್ತು ದಿನಾಂಕ:15.01.2013 ಹಾಗೂ
3. ಕಾಶಿಇ/ಶೈವಿ/218/ಸ್ಕೌಟ್ಸ್ & ಗೈಡ್ಸ್/2015-16 ದಿನಾಂಕ:09.08.2017.

********

ದಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ ಇವರ ಅಂದೋಲನವು ಯುವ ಜನಾಂಗದಲ್ಲಿ ಶಿಸ್ತು ಮತ್ತು ಸೇವಾ ಮನೋಭಾವವನ್ನು ಪಾಲಿಸುವಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿರುವ ಹಿನ್ನಲೆಯಲ್ಲಿ ಈ ಇಲಾಖೆಯ ವ್ಯಾಪ್ತಿಗೆ ಬರುವ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಎನ್.ಎಸ್.ಎಸ್. ಹಾಗೂ ಎನ್.ಸಿ.ಸಿ. ಘಟಕಗಳ ಜೊತೆಗೆ ದಿ ಭಾರತ್ ಸ್ಕೌಟ್ಸ್ & ಗೈಡ್ಸ್‌ನ ರೋವರ್ & ರೇಂಜರ್ ಘಟಕಗಳನ್ನು ಪ್ರಾರಂಭಿಸಲು ಹಾಗೂ ಸದರಿ ಕಾರ್ಯಕ್ರಮದಡಿ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಶುಲ್ಕವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳುವ ಬಗ್ಗೆ ಈಗಾಗಲೇ ಉಲ್ಲೇಖಿತ ಈ ಕಛೇರಿಯ ಸುತ್ತೋಲೆಗಳಲ್ಲಿ ಸ್ಪಷ್ಟ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿರುತ್ತದೆ. ಆದಾಗ್ಯೂ, ಕೆಲವೊಂದು ಕಾಲೇಜುಗಳಲ್ಲಿ ರೋವರ್ & ರೇಂಜರ್ ಘಟಕಗಳನ್ನು ಪ್ರಾರಂಭಿಸದೇ ಇರುವುದನ್ನು ಗಮನಿಸಲಾಗಿದ್ದು, ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಭಾರತ್ ಸ್ಕೌಟ್ಸ್ & ಗೈಡ್ಸ್‌ನ ರೋವರ್ & ರೇಂಜರ್ ಘಟಕಗಳನ್ನು ಪ್ರಾರಂಭಿಸಿ, ಈ ಕಛೇರಿಯ ಸುತ್ತೋಲೆಗಳಲ್ಲಿ (ಪ್ರತಿ ಲಗತ್ತಿಸಿದೆ) ನೀಡಿರುವ ಮಾರ್ಗಸೂಚಿಗಳನ್ವಯ ಯಾವ ಉದ್ದೇಶಗಳಿಗೆ ಸಂಗ್ರಹಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ವೆಚ್ಚ ಮಾಡಲು ಕ್ರಮ ವಹಿಸುವಂತೆ ಪ್ರಾಂಶುಪಾಲರುಗಳಿಗೆ ಈ ಮೂಲಕ ಸೂಚಿಸಲಾಗಿದೆ.

ಮುಂದುವರೆದು ರೇಂಜರ್ಸ್ ರೋವರ್ಸ್ ಸಂಬಂಧಪಟ್ಟ ಪುಸ್ತಕಗಳನ್ನು, ಸಿಡಿ ಹಾಗೂ ಸ್ಕೌಟ್ಸ್ & ಗೈಡ್ಸ್ ಸಂಸ್ಥೆಯಿಂದ ಪ್ರಕಟಿಸಲ್ಪಡುವ ಮಾಸಿಕ ವಾರ್ತಾ ಸಂಚಿಕೆಗಳನ್ನು ಸದರಿ ಅನುದಾನದಲ್ಲಿ ಕಡ್ಡಾಯವಾಗಿ ಬಳಸಿಕೊಂಡು ವಾಚನಾಲಯ/ ಗ್ರಂಥಾಲಯ / ಸ್ಕೌಟ್ಸ್ & ಗೈಡ್ಸ್ ಘಟಕದಲ್ಲಿ ವಿದ್ಯಾರ್ಥಿಗಳ ಪರಾಮರ್ಶನೆಗಾಗಿ ನೀಡುವಂತೆ ಸೂಚಿಸಲಾಗಿದೆ.

22/11

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ:**
1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಗುಲಬರ್ಗಾ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು-ಈ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.

**ಪ್ರತಿಯನ್ನು:**
1) ರಾಜ್ಯ ಕಾರ್ಯದರ್ಶಿಗಳು, ದಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ, "ಶಾಂತಿ ಗೃಹ", ನಂ.39, ಅರಮನೆ ರಸ್ತೆ, ಬೆಂಗಳೂರು-01.
2) ಆಯುಕ್ತರ, ನಿರ್ದೇಶಕರ, ಹೆಚ್ಚುವರಿ ನಿರ್ದೇಶಕರ, ಮುಖ್ಯ ಆಡಳಿತಾಧಿಕಾರಿಗಳ, ಜಂಟಿ ನಿರ್ದೇಶಕರ ಆಪ್ತಶಾಖೆಗೆ, ಕೇಂದ್ರ ಕಛೇರಿ, ಬೆಂಗಳೂರು.
3) ಕಛೇರಿ ಪ್ರತಿ.

# ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಶೈವಿ/218/ಸ್ಕೌಟ್ಸ್&ಗೈಡ್ಸ್/2015-16

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:22.11.2018.

ರಾಜ್ಯದ ಸರ್ಕಾರಿ / ಅನುದಾನಿತ ಕಾಲೇಜುಗಳಲ್ಲಿ ರೋವರ್ ಮತ್ತು ರೇಂಜರ್ ಘಟಕಗಳ ನೋಂದಣಿ / ನವೀಕರಿಸುವ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ ಹೊರಡಿಸಲಾಗಿರುವ ಸರ್ಕಾರದ ಆದೇಶ ಸಂಖ್ಯೆ:ಇಡಿ 85 ವಿವಿಧ 2018 ದಿನಾಂಕ:13.11.2018 ನ್ನು ಕೆಳಕಂಡವರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ರವಾನಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ – ತಮ್ಮ ವ್ಯಾಪ್ತಿಗೆ ಬರುವ ಸರ್ಕಾರಿ ಹಾಗೂ ಹಾಗೂ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ರವಾನಿಸಲು ಸೂಚಿಸಲಾಗಿದೆ.
2. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಿಗೆ ಪ್ರಾಂಶುಪಾಲರುಗಳಿಗೆ – ಜಂಟಿ ನಿರ್ದೇಶಕರುಗಳ ಮುಖಾಂತರ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು ತಿಳಿಸಲಾಗಿದೆ.

ಪ್ರತಿಯನ್ನು:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತಶಾಖೆಗೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560 001.
2) ರಾಜ್ಯ ಕಾರ್ಯದರ್ಶಿಗಳು, ದಿ ಭಾರತ್ ಸ್ಕೌಟ್ಸ್ & ಗೈಡ್ಸ್ ಕರ್ನಾಟಕ " ಶಾಂತಿ ಗೃಹ" ನಂ.39, ಅರಮನೆ ರಸ್ತೆ, ಬೆಂಗಳೂರು-560 001.
3) ಆಯುಕ್ತರ, ನಿರ್ದೇಶಕರ, ಹೆಚ್ಚುವರಿ ನಿರ್ದೇಶಕರ, ಜಂಟಿ ನಿರ್ದೇಶಕರ, ಮುಖ್ಯ ಆಡಳಿತಾಧಿಕಾರಿಗಳ ಆಪ್ತ ಶಾಖೆಗೆ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
4) ಕಛೇರಿ ಪ್ರತಿ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯದ ಸರ್ಕಾರಿ/ಅನುದಾನಿತ ಕಾಲೇಜುಗಳಲ್ಲಿ ರೋವರ್ ಮತ್ತು ರೇಂಜರ್ ಘಟಕಗಳ ನೊಂದಣಿ/ನವೀಕರಿಸುವ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ

ಓದಲಾಗಿದೆ:- (1) ರಾಜ್ಯ ಮುಖ್ಯ ಆಯುಕ್ತರು, ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರ ಪತ್ರ ಸಂಖ್ಯೆ:ಬಿಎಸ್.ಜಿ/ಎಸ್.ಹೆಚ್.ಕ್ಯೂ/712/2018-19, ದಿನಾಂಕ:20.06.2018

(2) ಕಾಲೇಜು ಶಿಕ್ಷಣ ಆಯುಕ್ತರ ಪತ್ರ ಸಂಖ್ಯೆ:ಕಾಶಿಇ/ಶೈವಿ/218/ಸ್ಕೌಟ್ಸ್-ಗೈಡ್ಸ್/2015-16, ದಿನಾಂಕ:27/06/2018

ಪ್ರಸ್ತಾವನೆ:-

ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಇವರು ರೋವರ್ಸ್ /ರೇಂಜರ್ಸ್ ನೊಂದಣಿ /ನವೀಕರಣ ಶುಲ್ಕ ಪ್ರತಿ ಘಟಕಕ್ಕೆ ಪ್ರತಿ ವರ್ಷಕ್ಕೆ ಹಿಂದೆ ಇದ್ದ ರೂ.156ಕ್ಕೆ ಬದಲಾಗಿ ರೂ.194ಕ್ಕೆ ಹೆಚ್ಚಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಪತ್ರದಲ್ಲಿ ಕಾಲೇಜು ಶಿಕ್ಷಣ ಆಯುಕ್ತರನ್ನು ಕೋರಿರುತ್ತಾರೆ.

ಕಾಲೇಜು ಶಿಕ್ಷಣ ಆಯುಕ್ತರು, ಸರ್ಕಾರದ ಆದೇಶ ಸಂಖ್ಯೆ:ಇಡಿ 46 ವಿವಿಧ 2010 ಬೆಂಗಳೂರು, ದಿನಾಂಕ:23/11/2011ರನ್ವಯ ಕಾಲೇಜುಗಳಲ್ಲಿ ರೋವರ್ಸ್ & ರೇಂಜರ್ಸ್ ಘಟಕಗಳ ಚಟುವಟಿಕೆಗಳಿಗಾಗಿ ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಲ್ಲಿನ ಪ್ರತಿ ಘಟಕವು ಜಿಲ್ಲಾ ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಛೇರಿಯಲ್ಲಿ ಪ್ರತಿ ವರ್ಷ ನೊಂದಣಿ / ನವೀಕರಿಸುವ ಸಲುವಾಗಿ ಪ್ರಸ್ತುತ ಪಾವತಿಸುತ್ತಿರುವ ಶುಲ್ಕವನ್ನು ರೂ.156/- (ಒಂದು ನೂರ ಐವತ್ತಾರು ರೂಪಾಯಿಗಳು ಮಾತ್ರ)ಗಳಿಂದ ರೂ.194/-( ಒಂದು ನೂರ ತೊಂಬತ್ತಾನಾಲ್ಕು ರೂಪಾಯಿಗಳು ಮಾತ್ರ)ಕ್ಕೆ ಹೆಚ್ಚಿಸುವ ಬಗ್ಗೆ ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಪತ್ರದಲ್ಲಿ ಸರ್ಕಾರದ ಅನುಮತಿಯನ್ನು ನೀಡುವಂತೆ ಪ್ರಸ್ತಾಪಿಸಿರುತ್ತಾರೆ.

**ಸರ್ಕಾರಿ ಆದೇಶ ಸಂಖ್ಯೆ:ಇಡಿ 85 ವಿವಿಧ 2018**
**ಬೆಂಗಳೂರು, ದಿನಾಂಕ: 13/11/2018**

ಪ್ರಸ್ತಾವನೆಯಲ್ಲಿನ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಇಡಿ 46 ವಿವಿಧ 2010, ದಿನಾಂಕ:23/11/2011ರನ್ವಯ, ಕಾಲೇಜುಗಳಲ್ಲಿ ರೋವರ್ಸ್ & ರೇಂಜರ್ಸ್ ಘಟಕಗಳ ಚಟುವಟಿಕೆಗಳಿಗಾಗಿ ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಲ್ಲಿನ ಪ್ರತಿ ಘಟಕವು ಪ್ರತಿ ವರ್ಷ ನೊಂದಣಿ / ನವೀಕರಿಸುವ ಶುಲ್ಕವಾಗಿ ಜಿಲ್ಲಾ ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಛೇರಿಗೆ ಪ್ರಸ್ತುತ ಪಾವತಿಸುತ್ತಿರುವ ರೂ.156/- ( ಒಂದು ನೂರ ಐವತ್ತಾರು ರೂಪಾಯಿಗಳು ಮಾತ್ರ)ಗಳನ್ನು ರೂ.194/-ಕ್ಕೆ ಹೆಚ್ಚಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಆಇ 01 ಟಿಎಫ್‌ಪಿ 1996, ದಿನಾಂಕ:10/07/1996 ರಲ್ಲಿ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

13/11/18

(ಎಂ.ಎ. ಅಹಮದ್ ಜಾನ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ವಿಶ್ವವಿದ್ಯಾಲಯ-2 & ಸಾಮಾನ್ಯ-2)

ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಇಲಾಖೆ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು-560001.
ದಿನಾಂಕ: 15.01.2013

ದೂ: 080-22343901, 22343904

ಸಂಖ್ಯೆ: ಕಾಶಿಇ/ಶೈವಿ/145/ಪಠ್ಯೇತರ/2010-11

## ಸುತ್ತೋಲೆ

**ವಿಷಯ:** ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ರೋವರ್/ರೇಂಜರ್ ಘಟಕಗಳಿಗಾಗಿ ಸಂಗ್ರಹಿಸುವ ಹಣವನ್ನು ಬಳಸಿಕೊಳ್ಳುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ:ಇಡಿ 46 ವಿವಿಧ 2010, ದಿನಾಂಕ:23.11.2011.
2. ಈ ಕಛೇರಿ ಸಮ ಸಂಖ್ಯೆ ಸುತ್ತೋಲೆ ದಿನಾಂಕ:14.06.2012
3. ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರವರ ಪತ್ರ ಸಂಖ್ಯೆ:ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/ಜಿಡಬ್ಲ್ಯೂ/423/2012-13 ದಿನಾಂಕ:02.11.2012.

********

ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಎನ್.ಎಸ್.ಎಸ್. ಹಾಗೂ ಎನ್.ಸಿ.ಸಿ. ಘಟಕಗಳ ಜೊತೆಗೆ ದಿ ಭಾರತ್ ಸ್ಕೌಟ್ಸ್ & ಗೈಡ್ಸ್‌ನ ರೋವರ್ & ರೇಂಜರ್ ಘಟಕಗಳನ್ನು ಪ್ರಾರಂಭಿಸಲು ಹಾಗೂ ಸದರಿ ಘಟಕಗಳ ಚಟುವಟಿಕೆಗಳಿಗಾಗಿ ವಿದ್ಯಾರ್ಥಿಗಳಿಂದ ಪ್ರತಿ ವರ್ಷ ಕಾಲೇಜು ಶುಲ್ಕದೊಂದಿಗೆ ರೂ.50/-ನ್ನು ಸಂಗ್ರಹಿಸಲು ಹಾಗೂ ಸಂಗ್ರಹಿಸಲಾದ ಹಣವನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಉಲ್ಲೇಖಿತ-2ರಲ್ಲಿ ಈಗಾಗಲೇ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ. ಮುಂದುವರೆದು, ಉಲ್ಲೇಖಿತ-3 ರ ಕಾರ್ಯದರ್ಶಿ, ಭಾರತ್ ಸ್ಕೌಟ್ಸ್ & ಗೈಡ್ಸ್ ರವರ ಪತ್ರದಲ್ಲಿ ಎಲ್ಲಾ ಕಾಲೇಜುಗಳಲ್ಲಿ ರೋವರ್/ರೇಂಜರ್ ಘಟಕಗಳನ್ನು ಕಡ್ಡಾಯವಾಗಿ ಪ್ರಾರಂಭ ಮಾಡಲು ಹಾಗೂ ವಿದ್ಯಾರ್ಥಿಗಳಿಂದ ವಸೂಲು ಮಾಡುವ ಶುಲ್ಕವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಲು ಕೆಲವು ಸೂಚನೆಗಳನ್ನು ನೀಡುವಂತೆ ಕೋರಿದ್ದು, ಈ ಸಂಬಂಧ, ರೋವರ್/ರೇಂಜರ್ ಘಟಕಗಳನ್ನು ಪ್ರಾರಂಭಿಸಿದ ನಂತರ ಅನುಸರಿಸಬೇಕಾದ ಕಾರ್ಯವಿಧಾನಗಳು ಹಾಗೂ ಈ ಸಂಬಂಧ ಸಂಗ್ರಹಿಸಲಾದ ಹಣವನ್ನು ವೆಚ್ಚ ಮಾಡುವ ಬಗ್ಗೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸುವಂತೆ ಸೂಚಿಸಿದೆ.

1) ರೋವರ್/ರೇಂಜರ್ ಘಟಕಗಳಿಗಾಗಿ ಸಂಗ್ರಹಿಸಿದ ಹಣವನ್ನು ಕೆಳಕಂಡ ಉದ್ದೇಶಗಳಿಗಾಗಿ ವಿನಿಯೋಗಿಸುವುದು.

- ✓ ಘಟಕಗಳ ನೋಂದಣಿ, ಶಿಬಿರ, ಚಾರಣ.
- ✓ ಸ್ಕೌಟಿಂಗ್ ಮತ್ತು ಗೈಡಿಂಗಿಗೆ ಸಂಬಂಧಪಟ್ಟ ಪುಸ್ತಕಗಳು
- ✓ ನಾಯಕ/ನಾಯಕಿಯರಿಗೆ (ಉಪನ್ಯಾಸಕರು) ತರಬೇತಿ ಪ್ರಯಾಣದ ಖರ್ಚುವೆಚ್ಚ.
- ✓ ರೋವರ್/ರೇಂಜರ್ ಚಟುವಟಿಕೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರಯಾಣ ಭತ್ಯೆ ಹಾಗೂ ನೋಂದಣಿ ಶುಲ್ಕ.
- ✓ ರೋವರ್/ರೇಂಜರ್‌ಗಳ ಸಮವಸ್ತ್ರ *(ಘಟಕ ಸೇರಿದಾಗ ಅವರುಗಳಿಗೆ ನೀಡಿ, ಘಟಕಕ್ಕೆ ಬರುವುದನ್ನು ನಿಲ್ಲಿಸಿದಾಗ ವಾಪಸ್ ಪಡೆಯತಕ್ಕದ್ದು ಮತ್ತು ಕಾಲೇಜಿನ ಸ್ಟಾಕ್‌ಬುಕ್‌ನಲ್ಲಿ ನಮೂದಿಸಬೇಕು)*
- ✓ ರೋವರ್/ರೇಂಜರ್ ತರಬೇತಿ ಸಾಮಾಗ್ರಿಗಳು ಮತ್ತು ಉಪಕರಣಗಳ ಖರೀದಿ (ದಾಸ್ತಾನು ಪುಸ್ತಕಕ್ಕೆ ತೆಗೆದುಕೊಳ್ಳುವುದು)
- ✓ ರೋವರ್/ರೇಂಜರ್ ಸಭೆ ಸಮಾರಂಭಗಳ ಖರ್ಚು.
- ✓ ಅಂತರ್‌ರಾಷ್ಟ್ರೀಯ ಕಾರ್ಯಕ್ರಮಗಳಿಗೆ ಆಯ್ಕೆಯಾದ ರೋವರ್/ರೇಂಜರ್‌ಗಳಿಗೆ ನೋಂದಣಿ ಶುಲ್ಕ.

ಉಪಸಮಿತಿಯನ್ನು ರಚಿಸಬೇಕು.
2) ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರ ನಾಯಕತ್ವದಲ್ಲಿ ಒಂದು ಉಪಸಮಿತಿಯನ್ನು ರಚಿಸಬೇಕು. ಕಾಲೇಜಿನ ಇಬ್ಬರು
ಸಮಿತಿಯ ಕಾರ್ಯದರ್ಶಿಗಳು ರೋವರ್ ಸ್ಕೌಟ್ ಮತ್ತು ರೇಂಜರ್ ಲೀಡರ್‌ಗಳಾಗಿದ್ದು, ಕಾಲೇಜಿನ ಇಬ್ಬರು
ಸಿಬ್ಬಂದಿಗಳು, ಇಬ್ಬರು ರೋವರ್ & ರೇಂಜರ್‌ಗಳು ಹಾಗೂ ಇಬ್ಬರು ಪೋಷಕರನ್ನು ಒಳಗೊಂಡ
ಉಪಸಮಿತಿಯನ್ನು ರಚಿಸಿ ಪ್ರತಿ ಮೂರು ವರ್ಷಕ್ಕೊಮ್ಮೆ ಸದಸ್ಯರುಗಳನ್ನು ಬದಲಾಯಿಸುವುದು. ಕನಿಷ್ಠ 3
ಸಭೆಗಳನ್ನು ಒಂದು ವರ್ಷದಲ್ಲಿ ನಡೆಸಬೇಕು.

3) ಕಾಲೇಜಿನ ಅವಧಿಯಲ್ಲಿ ವಾರಕ್ಕೊಮ್ಮೆ ತಂಡದ ಸಭೆಯನ್ನು ನಡೆಸುವುದು. ಮೇಲ್ಕಂಡ ಉಪಸಮಿತಿಯ
ನಿರ್ಣಯದಂತೆ ಘಟಕಗಳ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. ಸಂಗ್ರಹಿತವಾದ ಹಣಕಾಸಿನ ಜಮಾ
ಮತ್ತು ಖರ್ಚಿನ ವಿವರಣೆಯನ್ನು ಹಾಗೂ ವಾರ್ಷಿಕ ಚಟುವಟಿಕೆಯ ವರದಿಯನ್ನು ಹಾಗೂ ಮುಂಬರುವ ವರ್ಷದ
ಮುಂಗಡ ಆಯವ್ಯಯ ಪತ್ರ ಕಾಲೇಜಿನ ರೋವರ್/ರೇಂಜರ್ ಸಮಿತಿಯ ಮುಂದಿಟ್ಟು ವರ್ಷಕ್ಕೊಮ್ಮೆ ಒಪ್ಪಿಗೆ
ಪಡೆಯುವುದು.

. . . . . . 2

4) ವಾರ್ಷಿಕ ಚಟುವಟಿಕೆಯ ವರದಿಯನ್ನು ಜಿಲ್ಲಾ ಸಂಸ್ಥೆ ಮತ್ತು ರಾಜ್ಯ ಸಂಸ್ಥೆಯ ಸ್ಕೌಟ್ ಮತ್ತು ಗೈಡ್ ವಿಭಾಗಗಳಿಗೆ ಕಳುಹಿಸತಕ್ಕದ್ದು.

5) ತರಬೇತಿ ಪಡೆದ ಅಧ್ಯಾಪಕರುಗಳ ಸೇವಾ ಪುಸ್ತಕದಲ್ಲಿ ತರಬೇತಿ ವಿವರಗಳ ಕಾಲಂನಲ್ಲಿ ಆರ್.ಎಸ್.ಎಲ್/ಆರ್.ಎಲ್. ತರಬೇತಿ ಹೊಂದಿದ ಬಗ್ಗೆ ನಮೂದಿಸುವುದು ಹಾಗೂ ಪ್ರಮಾಣ ಪತ್ರದ ನಕಲನ್ನು ಲಗತ್ತಿಸುವುದು.

6) ಮೂಲ ತರಬೇತಿ ಪಡೆದ ಒಂದು ವರ್ಷದ ನಂತರ ರೋವರ್ ಸ್ಕೌಟ್ ಲೀಡರ್ ಮತ್ತು 6 ತಿಂಗಳ ನಂತರ ರೇಂಜರ್ ಲೀಡರ್‌ಗಳು ಮುಂದುವರೆದ ಆರ್.ಎಸ್.ಎಲ್/ಆರ್.ಎಲ್ ತರಬೇತಿಗಳನ್ನು ಪಡೆಯಲು ನಿಯೋಜಿಸುವುದು. ಎಲ್ಲಾ ಪ್ರಗತಿಪರ ಮತ್ತು ಇತರೆ ತರಬೇತಿಗಳಿಗೆ ಸುತ್ತೋಲೆ ಬಂದಾಗ ನಿಯೋಜಿಸುವುದು ಹಾಗೂ ರಾಜ್ಯ/ಜಿಲ್ಲಾ ಸಂಸ್ಥೆಯಿಂದ ಸಿಬ್ಬಂದಿಗಳಾಗಿ ಆಹ್ವಾನಿಸಿದಲ್ಲಿ ನಿಯೋಜಿಸುವುದು.

7) ರೋವರ್/ರೇಂಜರ್‌ಗಳ ಪ್ರಗತಿ ಪರ ಪದಕಗಳಾದ ಪ್ರವೀರ್ಣ, ನಿಪುಣ್(ರಾಜ್ಯಪಾಲರ ಪದಕ), ರಾಷ್ಟ್ರಪತಿ ಪದಕ ಪಡೆಯಲು ಪ್ರೋತ್ಸಾಹಿಸುವುದು.

8) ಸಂಸ್ಥೆಗೆ ಸಂಬಂಧಪಟ್ಟ ಪತ್ರ ವ್ಯವಹಾರವನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆಯ ಮುಖಾಂತರ ನಡೆಸುವುದು.

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ:**

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಗುಲಬರ್ಗಾ.
2. ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ರಾಜ್ಯ ಕಾರ್ಯದರ್ಶಿ, ದಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ, "ಶಾಂತಿ ಗೃಹ", ನಂ.39, ಅರಮನೆ ರಸ್ತೆ, ಬೆಂಗಳೂರು-01.

**ಪ್ರತಿಯನ್ನು:**

1. ಆಯುಕ್ತರ, ನಿರ್ದೇಶಕರ, ಹೆಚ್ಚುವರಿ ನಿರ್ದೇಶಕರ, ಮುಖ್ಯ ಆಡಳಿತಾಧಿಕಾರಿಗಳ, ಜಂಟಿ ನಿರ್ದೇಶಕರ ಆಪ್ತಶಾಖೆಗೆ, ಕೇಂದ್ರ ಕಛೇರಿ, ಬೆಂಗಳೂರು.
2. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಇಲಾಖೆ

ದೂ: 080-22343901, 22343904

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560001.

ಸಂಖ್ಯೆ: ಕಾಶಿಇ/ಶೈವಿ/145/ಪಠ್ಯೇತರ/2010-11

ದಿನಾಂಕ: 14.06.2012

## ಸುತ್ತೋಲೆ

**ವಿಷಯ:** ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ರೋವರ್/ರೇಂಜರ್ ಘಟಕಗಳನ್ನು ಕಡ್ಡಾಯವಾಗಿ ಪ್ರಾರಂಭಿಸುವ ಬಗ್ಗೆ.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ:ಇಡಿ 46 ವಿವಿಧ 2010, ದಿನಾಂಕ:23.11.2011.
2. ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರವರ ಪತ್ರ ಸಂಖ್ಯೆ:ಬಿಎಸ್‌ಜಿ/ಎಸ್‌ಹೆಚ್‌ಕ್ಯೂ/ಜಿಡಬ್ಲ್ಯೂ/87/2012-13 ದಿನಾಂಕ:04.05.2012.

********

ಭಾರತ್ ಸ್ಕೌಟ್ಸ್ & ಗೈಡ್ಸ್ ಕರ್ನಾಟಕ ಇವರ ಅಂದೋಲನವು ಯುವ ಜನಾಂಗದಲ್ಲಿ ಶಿಸ್ತು ಮತ್ತು ಸೇವಾ ಮನೋಭಾವವನ್ನು ಪಾಲಿಸುವಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿರುವ ಹಿನ್ನಲೆಯಲ್ಲಿ ಈ ಇಲಾಖೆಯ ವ್ಯಾಪ್ತಿಗೆ ಬರುವ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಎನ್.ಎಸ್.ಎಸ್. ಹಾಗೂ ಎನ್.ಸಿ.ಸಿ. ಘಟಕಗಳ ಜೊತೆಗೆ ದಿ ಭಾರತ್ ಸ್ಕೌಟ್ಸ್ & ಗೈಡ್ಸ್‌ನ ರೋವರ್ & ರೇಂಜರ್ ಘಟಕಗಳನ್ನು ಪ್ರಾರಂಭಿಸಲು ಹಾಗೂ ಸದರಿ ಘಟಕಗಳ ಚಟುವಟಿಕೆಗಳಿಗಾಗಿ ವಿದ್ಯಾರ್ಥಿಗಳಿಂದ ಪ್ರತಿ ವರ್ಷ ಕಾಲೇಜು ಶುಲ್ಕದೊಂದಿಗೆ ರೂ.50/- (ರೂಪಾಯಿ ಐವತ್ತು ಮಾತ್ರ) ಗಳನ್ನು ವಸೂಲು ಮಾಡಲು ಹಾಗೂ ಪ್ರತಿ ಘಟಕವು ರೂ.156/- (ರೂಪಾಯಿ ಒಂದು ನೂರ ಐವತ್ತಾರು ಮಾತ್ರ) ಗಳಂತೆ ಜಿಲ್ಲಾ ದಿ ಭಾರತ್ ಸ್ಕೌಟ್ಸ್ & ಗೈಡ್ಸ್ ಕಛೇರಿಯಲ್ಲಿ ಪ್ರತಿ ವರ್ಷ ನೋಂದಣಿ/ನವೀಕರಿಸಲು ಉಲ್ಲೇಖಿತ-1ರ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಲಾಗಿದ್ದು, ಕಾಲೇಜುಗಳಲ್ಲಿ ರೋವರ್/ರೇಂಜರ್ ಘಟಕಗಳನ್ನು ಪ್ರಾರಂಭಿಸುವ ಸಂಬಂಧ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ.

1. ರೋವರ್/ರೇಂಜರ್ ಘಟಕಗಳನ್ನು ಪ್ರಾರಂಭಿಸುವ ಮೊದಲು ಪ್ರತಿ ಘಟಕವನ್ನು ಮಾರ್ಗದರ್ಶನ ಮಾಡಲು ಕ್ರಮವಾಗಿ ಒಬ್ಬ ಪುರುಷ ಮತ್ತು ಒಬ್ಬ ಮಹಿಳಾ ಅಧ್ಯಾಪಕರು / ದೈಹಿಕ ಶಿಕ್ಷಣ ಅಧಿಕಾರಿಯನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯವರು ನಡೆಸುವ ಏಳು ದಿನಗಳ ಶಿಬಿರವಾಸ ತರಬೇತಿ ಪಡೆಯಲು ನಿಯೋಜಿಸುವುದು.
2. ಪ್ರತಿ ಘಟಕವು ರೂ.156/- ರಂತೆ ತಮ್ಮ ಜಿಲ್ಲಾ ಸ್ಕೌಟ್ಸ್ & ಗೈಡ್ಸ್ ಕಛೇರಿಯಲ್ಲಿ ಪ್ರತಿ ವರ್ಷ ಆಗಸ್ಟ್ 30ರ ಒಳಗೆ ನೋಂದಣಿ / ನವೀಕರಿಸುವುದು.
3. ಸ್ಕೌಟ್ ಗೈಡ್ ಸಂಸ್ಥೆಯ ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸಿದ ರೋವರ್ / ರೇಂಜರ್ ಘಟಕ ನಾಯಕ / ನಾಯಕಿಯರ ಗೈರು ಹಾಜರಿ ಅವಧಿಯನ್ನು ಹಾಜರಿ ಪ್ರಮಾಣ ಪತ್ರ ಪಡೆದು ಅನ್ಯ ಕಾರ್ಯ ನಿಮಿತ್ತವೆಂದು ಪರಿಗಣಿಸುವುದು.
4. ಘಟಕ ನಡೆಸುವ ಉಪನ್ಯಾಸಕ / ಉಪನ್ಯಾಸಕಿಯರ ವೇಳಾ ಪಟ್ಟಿಯಲ್ಲಿ ವಾರಕ್ಕೆ ಒಂದು ಅವಧಿಯನ್ನು ರೋವರ್ / ರೇಂಜರ್ ಕಾರ್ಯಕ್ರಮಕ್ಕೆ ಮೀಸಲಿಡುವುದು.
5. ದಿ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ರೋವರ್ ಮತ್ತು ರೇಂಜರ್ ಘಟಕ ಪ್ರಾರಂಭಿಸಲು ಹಾಗೂ ಈ ಘಟಕಗಳ ಚಟುವಟಿಕೆ ಸಂಬಂಧ ವಸೂಲಿ ಮಾಡಲಾಗುವ ಶುಲ್ಕವನ್ನು ಈ ಕೆಳಕಂಡಂತೆ ನಿರ್ವಹಣೆ ಮಾಡಲು ಸೂಚಿಸಿದೆ.
   ಅ) ಈ ಸಂಬಂಧ ಪ್ರಾಂಶುಪಾಲರು, ಕಾಲೇಜಿನ ಸ್ಕೌಟ್ಸ್ ಮತ್ತು ಗೈಡ್ಸ್‌ನ ನೋಡಲ್ ಅಧಿಕಾರಿ, ಹಿರಿಯ ಉಪನ್ಯಾಸಕರು, ಮ್ಯಾನೇಜರ್/ಅಧೀಕ್ಷಕರು ಒಳಗೊಂಡಂತೆ ಸಮಿತಿಯನ್ನು ರಚಿಸುವುದು. ಈ ಸಮಿತಿಯ ನಿರ್ಣಯದಂತೆ ಈ ಘಟಕಗಳ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.
   ಆ) ಪ್ರತ್ಯೇಕ ಅರೆ ಸರ್ಕಾರಿ ಖಾತೆಯನ್ನು ತೆರೆಯುವುದು. ದಿನವಹಿ ಹಾಗೂ ನಗದು ಪುಸ್ತಕಗಳನ್ನು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು&ಎಲ್ಲಾ ಜಮ/ಖರ್ಚು-ವೆಚ್ಚಗಳು ಲೆಕ್ಕಪರಿಶೋಧನೆಗೆ ಒಳಪಟ್ಟಿರುತ್ತವೆ.
   ಇ) ಈ ಸಂಬಂಧ ವಸೂಲು ಮಾಡಲಾಗುವ ಶುಲ್ಕವನ್ನು ಯಾವ ಉದ್ದೇಶಕ್ಕಾಗಿ ಸಂಗ್ರಹಿಸಲಾಗುವುದೋ ಅದೇ ಉದ್ದೇಶಕ್ಕೆ ಮಾತ್ರ ವಿನಿಯೋಗಿಸತಕ್ಕದ್ದು.

***ವಿ.ಸೂ:** ಹೆಚ್ಚಿನ ಮಾಹಿತಿಗಾಗಿ ರಾಜ್ಯ ಕಾರ್ಯದರ್ಶಿ, ದಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ, "ಶಾಂತಿ ಗೃಹ", ನಂ.39, ಅರಮನೆ ರಸ್ತೆ, ಬೆಂಗಳೂರು-01, ದೂ: 080-22267470 ರವರನ್ನು ಸಂಪರ್ಕಿಸುವುದು.*

*"ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"*

14/6/12
ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ:**

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಗುಲಬರ್ಗಾ.
2. ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ರಾಜ್ಯ ಕಾರ್ಯದರ್ಶಿ, ದಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ, "ಶಾಂತಿ ಗೃಹ", ನಂ.39, ಅರಮನೆ ರಸ್ತೆ, ಬೆಂಗಳೂರು-01.

**ಪ್ರತಿಯನ್ನು:**

1. ಆಯುಕ್ತರ, ನಿರ್ದೇಶಕರ, ಹೆಚ್ಚುವರಿ ನಿರ್ದೇಶಕರ, ಮುಖ್ಯ ಆಡಳಿತಾಧಿಕಾರಿಗಳ, ಜಂಟಿ ನಿರ್ದೇಶಕರ ಆಪ್ತಶಾಖೆಗೆ, ಕೇಂದ್ರ ಕಛೇರಿ, ಬೆಂಗಳೂರು.
2. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂರವಾಣಿ:080-22343904/05

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು-560001.

ಸಂಖ್ಯೆ:ಕಾಶಿಇ/ಶೈವಿ/218/ಸ್ಕೌಟ್ಸ್&ಗೈಡ್ಸ್/2015-16

ದಿನಾಂಕ:09.08.2017

# ಸುತ್ತೋಲೆ

ವಿಷಯ: ಸ್ಕೌಟ್ಸ್ & ಗೈಡ್ಸ್‌ನ ರೋವರ್ಸ್ ಹಾಗೂ ರೇಂಜರ್ಸ್ ಸಮವಸ್ತ್ರವನ್ನು ಖರೀದಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಇಡಿ 46 ವಿವಿಧ 2010, ದಿನಾಂಕ:23.11.2011.
2) ಈ ಕಛೇರಿಯ ಸುತ್ತೋಲೆ ಸಂಖ್ಯೆ: ಕಾಶಿಇ/ಶೈವಿ/145/ಪಠ್ಯೇತರ/2010-11, ದಿನಾಂಕ:15.01.2013.
3) ಕಾಲೇಜುಗಳಿಂದ ಸ್ವೀಕೃತಗೊಂಡಿರುವ ಪ್ರಾಂಶುಪಾಲರ ಪ್ರಸ್ತಾವನೆಗಳು.

* * * * * * * *

ಇಲಾಖೆ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಭಾರತ್ ಸ್ಕೌಟ್ಸ್ & ಗೈಡ್ಸ್‌ನ ರೋವರ್ಸ್/ರೇಂಜರ್ಸ್ ಘಟಕಗಳನ್ನು ಪ್ರಾರಂಭಿಸಿ, ತದನಂತರ ಅನುಸರಿಸಬೇಕಾದ ಕಾರ್ಯವಿಧಾನಗಳು ಹಾಗೂ ಈ ಸಂಬಂಧ ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸುವ ಹಣವನ್ನು ವೆಚ್ಚ ಮಾಡುವ ಬಗ್ಗೆ ಉಲ್ಲೇಖ-(2)ರ ಈ ಕಛೇರಿ ಸುತ್ತೋಲೆಯಲ್ಲಿ ಈಗಾಗಲೇ ಸ್ಪಷ್ಟ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿದ್ದು, ಅದರನ್ವಯ ರೋವರ್/ರೇಂಜರ್‌ಗಳ ಸಮವಸ್ತ್ರಗಳನ್ನು ಅಧ್ಯಾಪಕರನ್ನು ಹೊರತುಪಡಿಸಿ, ವಿದ್ಯಾರ್ಥಿಗಳಿಗೆ ಮಾತ್ರ ಕೆ.ಟಿ.ಪಿ.ಪಿ. ನಿಯಮಗಳನ್ವಯ ಖರೀದಿಸಬಹುದಾಗಿದೆ. ಸದರಿ ಖಾತೆಯಲ್ಲಿ ಬಾಕಿ ಉಳಿದಿರುವ ಮೊತ್ತವೂ ಸೇರಿದಂತೆ ಪ್ರಸ್ತುತ ವರ್ಷದಲ್ಲಿ ಸಂಗ್ರಹಿಸಲಾಗಿರುವ ಮೊತ್ತವನ್ನು ಸದರಿ ಮಾರ್ಗಸೂಚಿಗಳನುಸಾರ ಯಾವ ಉದ್ದೇಶಗಳಿಗೆ ಸಂಗ್ರಹಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ವೆಚ್ಚ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

'ಕರಡು, ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ'

**ಕಾಲೇಜು ಶಿಕ್ಷಣ ನಿರ್ದೇಶಕರು**

ಇವರಿಗೆ:
1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.

ಪ್ರತಿಯನ್ನು:
1. ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ, ನಂ.39, "ಶಾಂತಿಗೃಹ", ಅರಮನೆ ರಸ್ತೆ, ಬೆಂಗಳೂರು-560001.
2. ಕಛೇರಿ ಪ್ರತಿ.